

بسم اللهِ الرّحمٰن الرّحيم

# ಸತ್ಯಸಂಧತೆಯ ಹಿನ್ನೆಲೆಯಲ್ಲಿ ಹಝ್ರತ್ ಪೈಗಂಬರ್[ಸ]ರ ಜೀವನ ಚರಿತ್ರೆಯ ವಿಶ್ವಾಸವರ್ಧಕ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **17–04–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್,* ಸೂರಃ ಯೂನುಸ್‌ನ 17 ಮತ್ತು 18ನೇ ಆಯತ್ತುಗಳನ್ನು ಪಠಿಸಿದರು, ಅನಂತರ *ಹೀಗೆ ಹೇಳಿದರು:)*

ಈ ವಚನಗಳ ಅನುವಾದ ಹೀಗಿದೆ, **ಹೇಳು: 'ಇದರ ಬದಲಿಗೆ ಬೇರೊಂದು ಅಧ್ಯಾಪನವನ್ನು ನೀಡಬೇಕೆಂದು ಅಲ್ಲಾಹನು ಉದ್ದೇಶಿಸಿದ್ದರೆ ಈ ಖುರ್‌ಆನನ್ನು ನಿಮಗೆ ನಾನು ಓದಿ ಹೇಳುತ್ತಿರಲಿಲ್ಲ. ಅವನು ನಿಮಗೆ ಅದರ ಕುರಿತು ತಿಳಿಸಿಕೊಡುತ್ತಲೂ ಇರಲಿಲ್ಲ. ಇದಕ್ಕೆ ಮುಂಚೆ ಒಂದು ದೀರ್ಘಕಾಲ ನಾನು ನಿಮ್ಮ ಮಧ್ಯೆ ಜೀವಿಸುತ್ತಿದ್ದೆನಲ್ಲವೇ? ಆದರೂ ನೀವು ಮನವರಿಕೆ ಮಾಡುವುದಿಲ್ಲವೇ?'**

**ಅಲ್ಲಾಹನ ನಾಮದಲ್ಲಿ ಸುಳ್ಳು ಸೃಷ್ಟಿಸುವವನಿಗಿಂತ ಅಥವಾ ಅವನ ದೃಷ್ಟಾಂತಗಳನ್ನು ಸುಳ್ಳಾಗಿಸುವವನಿಗಿಂತ ದೊಡ್ಡ ಅತಿಕರ್ಮಿ ಬೇರೆ ಯಾರು? ಖಂಡಿತವಾಗಿಯೂ ಅಪರಾಧಿಗಳು ವಿಜಯಗಳಿಸಲಾರರು.**

ಹಝ್ರತ್ ಪೈಗಂಬರ್[ಸ]ರ ಜೀವನ ಚರಿತ್ರೆಯ ವಿವಿಧ ಆಯಾಮಗಳ ಕುರಿತು ಪ್ರಸ್ತಾಪಿಸಲಾಗುತ್ತಿದೆ. ಇಂದು ಅವರ ಸತ್ಯಸಂಧತೆ, ಪ್ರಾಮಾಣಿಕತೆ ಮತ್ತು ಸತ್ಯನಿಷ್ಠೆಯ ಗುಣಗಳ ಬಗ್ಗೆ ಪ್ರಸ್ತಾಪಿಸಲಾಗುವುದು.

ಹಝ್ರತ್ ಪೈಗಂಬರ್[ಸ]ರ ಜೀವನ ಚರಿತ್ರೆಯ ಘಟನೆಗಳಲ್ಲಿ ಅವರ ಸತ್ಯಸಂಧತೆಯ ಅತ್ಯುನ್ನತ ಉದಾಹರಣೆಗಳು ಸಿಗುತ್ತವೆ. ಶತ್ರುಗಳು ಕೂಡ ಹಝ್ರತ್ ಪೈಗಂಬರ್[ಸ]ರ ಪ್ರಾಮಾಣಿಕತೆಯ ಅತ್ಯುನ್ನತ ಗುಣಮಟ್ಟವನ್ನು ಒಪ್ಪಿಕೊಳ್ಳದೆ ಇರಲಾರರು. ಸತ್ಯಸಂಧತೆಯ ಅತ್ಯುನ್ನತ ಗುಣಮಟ್ಟವನ್ನು ಸ್ಥಾಪಿಸುವಂತೆ ಹಝ್ರತ್ ಪೈಗಂಬರ್[ಸ] ತಮ್ಮ ಅನುಯಾಯಿಗಳಿಗೂ ಉಪದೇಶ ನೀಡಿದ್ದರು. ಆದ್ದರಿಂದ ಇಂದು ಈ ಹಿನ್ನೆಲೆಯಲ್ಲಿ ನಾವೆಲ್ಲರೂ ನಮ್ಮ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಈ ಸತ್ಯಸಂಧತೆಯ ಅತ್ಯುನ್ನತ ಗುಣಮಟ್ಟಗಳೇ ನಮ್ಮ ಜೀವನದ ಪ್ರತಿಯೊಂದು ಕ್ಷಣದಲ್ಲೂ ನಮ್ಮ ಯಶಸ್ಸನ್ನು ಖಾತರಿಪಡಿಸುವುದು ಮತ್ತು ಅದೇ ರೀತಿ ನಮಗಾಗಿ ತಬ್ಲೀಗಿನ ಮಾರ್ಗಗಳನ್ನು ತೆರೆಯುವ ಸಾಧನವಾಗಿವೆ.

ಹಝ್ರತ್ ಪೈಗಂಬರ್[ಸ]ರ ಪವಿತ್ರ ಜೀವನದ ಕುರಿತು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್[ರ] ಒಂದೆಡೆ ಹೀಗೆ ಹೇಳಿದ್ದಾರೆ: ಹಝ್ರತ್ ಪೈಗಂಬರ್[ಸ]ರ ವಿಷಯದಲ್ಲಿ ನಾವು ನೋಡುವುದೇನೆಂದರೆ, ಅವರ ಶತ್ರುಗಳು ಕೂಡ ಅವರು ಸತ್ಯವಂತರು ಮತ್ತು ನಂಬಿಕಸ್ತರೆಂದು ಒಪ್ಪಿಕೊಂಡಿದ್ದರು ಮತ್ತು ಅವರ ಮೇಲೆ ಯಾವುದೇ ಆಪಾದನೆಯನ್ನು ಹೊರಿಸಲಿಲ್ಲ. ಶತ್ರುಗಳು ಕೂಡ ಅವರ ಸತ್ಯಸಂಧತೆ ಮತ್ತು ಪರಿಶುದ್ಧತೆಗೆ ಸಾಕ್ಷಿ ನುಡಿದರು.

ಹಝ್ರತ್ ಪೈಗಂಬರ್[ಸ]ರ ಯಾವ ವಿಷಯವು ವಿರೋಧಿಗಳ ಮೇಲೆ ಪ್ರಭಾವ ಬೀರುತ್ತಿತ್ತು? ವಿರೋಧಿಗಳು ಆರಂಭದಲ್ಲಿ ಪವಿತ್ರ ಖುರ್‌ಆನಿನಿಂದ ಪ್ರಭಾವಿತರಾಗಲಿಲ್ಲ, ಬದಲಾಗಿ ಅವರು ಪ್ರಭಾವಿತರಾಗಲು ಕಾರಣ ಹಝ್ರತ್ ಪೈಗಂಬರ್[ಸ]ರ ಹಿಂದಿನ ಜೀವನವಾಗಿತ್ತು. ಹಝ್ರತ್ ಪೈಗಂಬರ್[ಸ] ಅವರ ಮಧ್ಯೆ ವಾಸಿಸಿದ್ದರು; ಹಝ್ರತ್ ಪೈಗಂಬರ್[ಸ] ಪ್ರಾಮಾಣಿಕತೆ, ಸತ್ಯಸಂಧತೆ, ಸಾರ್ವಜನಿಕ ಸಹಾನುಭೂತಿ ಮತ್ತು ತ್ಯಾಗವು ಜನರ ಮೇಲೆ ಪ್ರಭಾವ ಬೀರುತ್ತಿತ್ತು. ಪ್ರವಾದಿತ್ವದ ವಾದದ ಮೊದಲು ಹಝ್ರತ್ ಪೈಗಂಬರ್[ಸ] ಜನರನ್ನು ಶಿರ್ಕ್ ಮಾಡುವುದರಿಂದ ತಡೆಯುತ್ತಿರಲಿಲ್ಲ, ಏಕೆಂದರೆ ದೈವಿಕ ಆಜ್ಞೆ ಬಂದಿರಲಿಲ್ಲ, ಆದರೆ ಸ್ವತಃ ಅವರು ಮುಶ್ರಿಕ್ ಆಗಿರಲಿಲ್ಲ. ಆದ್ದರಿಂದ ಅವರ ನಡವಳಿಕೆಯ ಶ್ರೇಷ್ಠತೆಯು ಪ್ರಭಾವ ಬೀರುತ್ತಿತ್ತು ಮತ್ತು ಈ ಪ್ರಭಾವವು ಒಳಗೊಳಗೇ ಅವರ ಮೇಲೆ ಪರಿಣಾಮ ಬೀರುತ್ತಿತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ದೇವನು ನಮ್ಮ ನಾಯಕರಾದ ಕೊನೆಯ ಕಾಲದ ಪ್ರವಾದಿಯಾದ, ಸಜ್ಜನರ ನಾಯಕರಾಗಿದ್ದ ಹಝ್ರತ್ ಪೈಗಂಬರ್(ಸ)ರನ್ನು ವಿವಿಧ ರೀತಿಯ ಸಹಾಯಗಳ ಮೂಲಕ ವಿಜಯಶಾಲಿಯನ್ನಾಗಿಸಿದನು. ಆರಂಭದಲ್ಲಿ ಹಝ್ರತ್ ಮೂಸಾ(ಅ) ಮತ್ತು ಹಝ್ರತ್ ಈಸಾ(ಅ)ರಂತೆಯೇ ಹಝ್ರತ್ ಪೈಗಂಬರ್(ಸ)ರಿಗೂ ವಲಸೆ ಮಾಡಬೇಕಾಗಿ ಬಂತು. ಆದರೆ ಆ ಹಿಜ್ರತ್ ಅಥವಾ ವಲಸೆಯೇ ವಿಜಯದ ಅಡಿಪಾಯವನ್ನು ಹೊಂದಿತ್ತು. ಆದ್ದರಿಂದ ಸ್ನೇಹಿತರೇ, ಖಂಡಿತವಾಗಿ ತಿಳಿದುಕೊಳ್ಳಿರಿ, ದೇವಭಯ ಹೊಂದಿರುವವನು ಎಂದಿಗೂ ನಾಶವಾಗಲಾರನು. ಎರಡು ಗುಂಪುಗಳು ಪರಸ್ಪರ ಶತ್ರುಗಳಾಗುವಾಗ ಮತ್ತು ದ್ವೇಷವು ಮಿತಿಮೀರುವಾಗ, ಯಾವ ಗುಂಪು ದೇವನ ದೃಷ್ಟಿಯಲ್ಲಿ ದೇವಭಯ ಉಳ್ಳದ್ದಾಗಿರುತ್ತದೆಯೋ ಮತ್ತು ಸಜ್ಜನರಾಗಿರುತ್ತದೆಯೋ, ಅವರಿಗೆ ಆಕಾಶದಿಂದ ಸಹಾಯ ಇಳಿಯುತ್ತದೆ. ಈ ರೀತಿಯಲ್ಲಿ ದೈವಿಕ ತೀರ್ಪಿನ ಮೂಲಕ ಧಾರ್ಮಿಕ ವಿವಾದಗಳು ಬಗೆಹರಿಯುತ್ತವೆ.

ಅಲ್ಲಾಹನು ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ)ರನ್ನು ಉದ್ದೇಶಿಸಿ, 'ನೀನು ಮಹೋನ್ನತವಾದ ನೈತಿಕ ಗುಣಗಳನ್ನು ಹೊಂದಿರುವೆ' ಎಂದು ಹೇಳಿದ್ದಾನೆ. ಅಂದರೆ ಎಲ್ಲ ರೀತಿಯ ನೈತಿಕ ಗುಣಗಳು ನಿನ್ನಲ್ಲಿ ಅಡಕವಾಗಿವೆ. ಒಟ್ಟಾರೆಯಾಗಿ, ಮನುಷ್ಯನ ಹೃದಯದಲ್ಲಿರುವಂತಹ ಶಕ್ತಿಗಳನ್ನು ಮತ್ತು ಎಲ್ಲ ಸ್ವಾಭಾವಿಕ ಸ್ಥಿತಿಗಳನ್ನು ಬುದ್ಧಿ ಮತ್ತು ವಿವೇಕದಿಂದ ಅವುಗಳ ಸೂಕ್ತ ಸಂದರ್ಭದಲ್ಲಿ ಪ್ರಕಟಿಸಿದರೆ, ಅವೆಲ್ಲವುಗಳನ್ನು ನೈತಿಕತೆ ಎಂದು ಕರೆಯಲಾಗುತ್ತದೆ.

ಹಝ್ರತ್ ಪೈಗಂಬರ್(ಸ) ಸತ್ಯವನ್ನು ಲೋಕದಲ್ಲಿ ಹರಡಲು ಆಗಮಿಸಿದ್ದರು, ಆದ್ದರಿಂದ ವಿವಿಧ ಸಂದರ್ಭಗಳಲ್ಲಿ ತಮ್ಮನ್ನು ನಂಬಿದವರಿಗೂ ಸತ್ಯವನ್ನು ಅಳವಡಿಸಿಕೊಳ್ಳಲು ಉಪದೇಶ ನೀಡಿದ್ದಾರೆ. ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: 'ಸತ್ಯವು ನಿಮ್ಮ ಮೇಲೆ ಕಡ್ಡಾಯವಾಗಿದೆ, ಏಕೆಂದರೆ ಸತ್ಯವು ಒಳಿತಿನ ಕಡೆಗೆ ಕೊಂಡೊಯ್ಯುತ್ತದೆ, ಒಳಿತು ಸ್ವರ್ಗದ ಕಡೆಗೆ ಕೊಂಡೊಯ್ಯುತ್ತದೆ. ಓರ್ವ ವ್ಯಕ್ತಿಯು ನಿರಂತರವಾಗಿ ಸತ್ಯ ಹೇಳುತ್ತಿದ್ದರೆ ಮತ್ತು ಸತ್ಯದ ಹುಡುಕಾಟದಲ್ಲೇ ತೊಡಗಿದ್ದರೆ, ಕೊನೆಗೆ ಅವನು ಅಲ್ಲಾಹನ ಸನ್ನಿಧಿಯಲ್ಲಿ ಅತ್ಯಂತ ಸತ್ಯವಂತ (ಸಿದ್ದೀಖ್) ಎಂದು ಬರೆಯಲ್ಪಡುತ್ತಾನೆ. ನೀವು ಸುಳ್ಳಿನಿಂದ ದೂರವಿರಿ, ಏಕೆಂದರೆ ಸುಳ್ಳು ಪಾಪದ ಕಡೆಗೆ ಕೊಂಡೊಯ್ಯುತ್ತದೆ ಮತ್ತು ಪಾಪವು ನರಕದ ಬೆಂಕಿಗೆ ಕೊಂಡೊಯ್ಯುತ್ತದೆ. ಮನುಷ್ಯನು ನಿರಂತರವಾಗಿ ಸುಳ್ಳು ಹೇಳುತ್ತಿದ್ದರೆ ಕೊನೆಗೆ ಅವನು ಅಲ್ಲಾಹನ ಸನ್ನಿಧಿಯಲ್ಲಿ ಮಹಾ ಸುಳ್ಳುಗಾರ (ಕದ್ದಾಬ್) ಎಂದು ಬರೆಯಲ್ಪಡುತ್ತಾನೆ.'

ಮತ್ತೊಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: 'ಖಂಡಿತವಾಗಿಯೂ ಸುಳ್ಳು ಯಾವುದೇ ಪರಿಸ್ಥಿತಿಯಲ್ಲೂ ಸರಿಯಲ್ಲ, ಗಂಭೀರ ಸ್ಥಿತಿಯಲ್ಲೂ ತಮಾಷೆಯಲ್ಲೂ ಅದು ತಪ್ಪು. ಯಾರಾದರೂ ತನ್ನ ಮಗುವಿಗೆ ಏನಾದರೂ ವಾಗ್ದಾನ ಮಾಡಿ ಅದನ್ನು ಪೂರೈಸದಿರುವುದೂ ಸರಿಯಲ್ಲ.'

ಅಲ್ಲಾಮಾ ರಾಝಿ ಸೂರಃ ತೌಬಾದ 119ನೇ ಆಯತ್ತಿನ ವಿವರಣೆಯಲ್ಲಿ ಹೇಳುತ್ತಾರೆ: ಓರ್ವ ವ್ಯಕ್ತಿ ಹಝ್ರತ್ ಪೈಗಂಬರ್(ಸ)ರ ಬಳಿ ಬಂದು ಹೀಗೆ ಹೇಳಿದನು: 'ನಾನು ನನ್ನ ಕೆಡುಕುಗಳಿಂದ ದೂರವಿರಲು ಬಯಸುವ ವ್ಯಕ್ತಿಯಾಗಿದ್ದೇನೆ, ಆದರೆ ನನ್ನಲ್ಲಿ ಮದ್ಯಪಾನ, ಕಳ್ಳತನ, ವ್ಯಭಿಚಾರ ಮತ್ತು ಸುಳ್ಳು ಹೇಳುವ ಅಭ್ಯಾಸಗಳು ಬಹಳ ಹೆಚ್ಚಾಗಿವೆ. ನೀವು ಈ ಸಂಗತಿಗಳನ್ನು ನಿಷೇಧಿಸಿದ್ದೀರಿ ಎಂದು ಜನರು ಹೇಳುತ್ತಾರೆ. ಇವೆಲ್ಲವನ್ನೂ ಬಿಟ್ಟುಬಿಡುವ ಸಂಪೂರ್ಣ ಶಕ್ತಿ ನನಗಿಲ್ಲ. ನೀವು ಯಾವುದಾದರೂ ಒಂದನ್ನು ಮಾತ್ರ ಬಿಡಲು ನನಗೆ ಹೇಳಿದರೆ, ನಾನು ನಿಮ್ಮ ಮೇಲೆ ವಿಶ್ವಾಸವಿಡುತ್ತೇನೆ'. ಹಝ್ರತ್ ಪೈಗಂಬರ್(ಸ) ಹೇಳಿದರು: 'ಸರಿ, ನೀನು ಸುಳ್ಳು ಹೇಳುವುದನ್ನು ಬಿಟ್ಟುಬಿಡು'. ಅವನು ಸುಳ್ಳು ಹೇಳುವುದನ್ನು ಬಿಡುವ ವಾಗ್ದಾನ ಮಾಡಿ ಮುಸಲ್ಮಾನನಾದನು. ನಂತರ ಅವನು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಿಂದ ಹೊರಟುಹೋದಾಗ, ಅವನಿಗೆ ಈ ಎಲ್ಲ ಕೆಡುಕುಗಳನ್ನು ಮಾಡುವ ಅವಕಾಶಗಳು ಎದುರಾದವು. ಆದರೆ ಒಂದು ವೇಳೆ ತಾನು ಈ ಕೆಡುಕುಗಳಲ್ಲಿ ಭಾಗಿಯಾಗಿ, ಹಝ್ರತ್ ಪೈಗಂಬರ್(ಸ) ಕೇಳಿದರೆ ಸತ್ಯ ಹೇಳಬೇಕಾಗುತ್ತದೆ ಎಂಬ ಯೋಚನೆಯಿಂದ ಅವನು ಆ ಎಲ್ಲ ಕೆಡುಕುಗಳಿಂದ ದೂರ ಸರಿಯುತ್ತಾ ಹೋದನು.

ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ)ರ ಪ್ರವಾದಿತ್ವದ ವಾದದ ವಿಷಯ ತಲುಪಿದಾಗ, ಅವರು ಹಝ್ರತ್ ಪೈಗಂಬರ್(ಸ)ರ ಬಳಿ ಬಂದು ಹೀಗೆ ಹೇಳಿದರು: 'ನಿಮ್ಮ ಬಗ್ಗೆ ನನಗೊಂದು ಸುದ್ದಿ ತಲುಪಿದೆ'. ಹಝ್ರತ್ ಪೈಗಂಬರ್(ಸ) ಕೇಳಿದರು: 'ಹೇ ಅಬೂ ಬಕರ್! ನನ್ನ ಬಗ್ಗೆ ನಿನಗೆ ತಲುಪಿದ ಸುದ್ದಿ ಏನು?'. ಹಝ್ರತ್ ಅಬೂಬಕರ್ ಹೇಳಿದರು: 'ನೀವು ಏಕದೇವನ ಕಡೆಗೆ ಜನರನ್ನು ಕರೆಯುತ್ತಿದ್ದೀರಿ ಮತ್ತು ನೀವು ಅಲ್ಲಾಹನ ಪ್ರವಾದಿಯಾಗಿದ್ದೀರಿ ಎಂದು ಹೇಳುತ್ತಿದ್ದೀರಿ ಎಂಬ ಸುದ್ದಿ ನನಗೆ ತಲುಪಿದೆ'. ಹಝ್ರತ್ ಪೈಗಂಬರ್(ಸ) ಹೇಳಿದರು: 'ಹೌದು ಅಬೂಬಕರ್, ಖಂಡಿತವಾಗಿಯೂ ನನ್ನ ಒಡೆಯನಾದ ಅಲ್ಲಾಹನು ನನ್ನನ್ನು ಶುಭಸುದ್ದಿ ನೀಡುವವನನ್ನಾಗಿ ಮತ್ತು ಎಚ್ಚರಿಸುವವನನ್ನಾಗಿ ಮಾಡಿದ್ದಾನೆ, ನನ್ನನ್ನು ಇಬ್ರಾಹೀಮರ ಪ್ರಾರ್ಥನೆಯ ಫಲವಾಗಿಸಿದ್ದಾನೆ ಮತ್ತು ಇಡೀ ಮಾನವಕುಲದ ಕಡೆಗೆ ಕಳುಹಿಸಿದ್ದಾನೆ'. ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: 'ದೇವನಾಣೆ, ನಾನು ನಿಮ್ಮನ್ನು ಎಂದೂ ಸುಳ್ಳು ಹೇಳುವುದಾಗಿ ಕಂಡಿಲ್ಲ. ನಿಮ್ಮ ಪ್ರಾಮಾಣಿಕತೆಯ ಶ್ರೇಷ್ಠತೆ, ಸಂಬಂಧಗಳನ್ನು ಬೆಸೆಯುವ ಗುಣ ಮತ್ತು ಉತ್ತಮ ಕಾರ್ಯಗಳಿಂದಾಗಿ ನೀವೇ ಪ್ರವಾದಿತ್ವಕ್ಕೆ ಹೆಚ್ಚು ಅರ್ಹರಾಗಿದ್ದೀರಿ. ನಿಮ್ಮ ಕೈ ಚಾಚಿರಿ, ನಾನು ನಿಮ್ಮ

ಬೈಅತ್ ಮಾಡುತ್ತೇನೆ’. ಆಗ ಹಝ್ರತ್ ಪೈಗಂಬರ್(ಸ) ತಮ್ಮ ಕೈಯನ್ನು ಚಾಚಿದರು ಮತ್ತು ಹಝ್ರತ್ ಅಬೂಬಕರ್(ರ) ಬೈಅತ್ ಮಾಡಿಕೊಂಡರು.

ದೇವವಾಣಿಯ ಆರಂಭದ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರ ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯ ಕುರಿತು ಹಝ್ರತ್ ಖದೀಜ(ರ) ಆಡಿದ ವೈಭವಶಾಲಿ ಮಾತುಗಳನ್ನು ಉಲ್ಲೇಖಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಐವತ್ತೈದು ವರ್ಷದ, ಅವರದೇ ಊರಿನ, ಅವರದೇ ಕೋಮಿನ, ಕಳೆದ ಹದಿನೈದು ವರ್ಷಗಳಿಂದ ಹಝ್ರತ್ ಪೈಗಂಬರ್(ಸ)ರೊಂದಿಗೆ ವಿವಾಹ ಸಂಬಂಧದಲ್ಲಿರುವ ಮಹಿಳೆಯೊಬ್ಬಳು ಎಂತಹ ಸಾಕ್ಷ್ಯವನ್ನು ನೀಡುತ್ತಿದ್ದಾರೆ ಎಂದು ನೋಡಿರಿ. ಹಝ್ರತ್ ಪೈಗಂಬರ್(ಸ) ದುಃಖಿತರಾಗಿದ್ದ ಮತ್ತು ಕಳವಳಗೊಂಡಿದ್ದಂತಹ ಸಮಯದಲ್ಲಿ ಹಝ್ರತ್ ಖದೀಜ(ರ)ರ ಸಾಕ್ಷ್ಯವು ಬಹಳ ಗಮನಾರ್ಹವಾಗಿದೆ. ಒಂದು ವೇಳೆ ಹಝ್ರತ್ ಪೈಗಂಬರ್(ಸ)ರಲ್ಲಿ ಈ ಗುಣಗಳಿಲ್ಲದಿರುತ್ತಿದ್ದರೆ, ಹಝ್ರತ್ ಖದೀಜ(ರ)ರ ಈ ಮಾತುಗಳು ಆ ಸಮಯದಲ್ಲಿ ಖಂಡಿತವಾಗಿಯೂ ಹಝ್ರತ್ ಪೈಗಂಬರ್(ಸ)ರಿಗೆ ಸಮಾಧಾನವನ್ನು ಕೊಡುತ್ತಿರಲಿಲ್ಲ.

ಅಬೀ ತಾಲಿಬ್‌ನ ಕಣಿವೆಯಲ್ಲಿ ದಿಗ್ಬಂಧನದ ಅವಧಿಯು ಮೂರನೇ ವರ್ಷಕ್ಕೆ ಕಾಲಿಡುತ್ತಿದ್ದಾಗ, ಬನೂ ಹಾಶಿಮ್ ಜನಾಂಗದವರನ್ನು ಬಹಿಷ್ಕರಿಸಲು ಕಅ್‌ಬಾದಲ್ಲಿ ನೇತುಹಾಕಲಾಗಿದ್ದ ಒಪ್ಪಂದದ ಪತ್ರದಲ್ಲಿನ ಎಲ್ಲ ಬರಹವನ್ನು, ಅಲ್ಲಾಹನ ಹೆಸರನ್ನು ಹೊರತುಪಡಿಸಿ, ಗೆದ್ದಲುಗಳು ತಿಂದುಹಾಕಿವೆ ಎಂಬ ಮಾಹಿತಿಯನ್ನು ಅಲ್ಲಾಹನಿಂದ ದಿವ್ಯವಾಣಿ ಮೂಲಕ ಪಡೆದು ಹಝ್ರತ್ ಪೈಗಂಬರ್(ಸ) ತಮ್ಮ ಚಿಕ್ಕಪ್ಪ ಅಬೂ ತಾಲಿಬ್‌ರಿಗೆ ಅದನ್ನು ತಿಳಿಸಿದರು. ಅಬೂ ತಾಲಿಬ್‌ರಿಗೆ ಹಝ್ರತ್ ಪೈಗಂಬರ್(ಸ)ರ ಮಾತಿನ ಮೇಲೆ ಎಷ್ಟೊಂದು ವಿಶ್ವಾಸವಿತ್ತೆಂದರೆ, ಅವರು ಮೊದಲು ತಮ್ಮ ಸಹೋದರರೊಡನೆ ಹೀಗೆ ಹೇಳಿದರು: ‘ಮುಹಮ್ಮದ್(ಸ) ಇಂದಿನವರೆಗೂ ನನ್ನೊಂದಿಗೆ ಸುಳ್ಳು ಹೇಳಿಲ್ಲ’. ಅನಂತರ ಅವರು ಸಹೋದರರೊಂದಿಗೆ ಖುರೈಶಿಯರ ಮುಖಂಡರ ಬಳಿಗೆ ಹೋಗಿ ಹೀಗೆ ಹೇಳಿದರು: ‘ನನ್ನ ಸಹೋದರ ಪುತ್ರನು ನನ್ನೊಡನೆ ಹೀಗೆ ಹೇಳಿದ್ದಾನೆ. ಅವನು ನನ್ನೊಡನೆ ಎಂದಿಗೂ ಸುಳ್ಳು ಹೇಳಿಲ್ಲ. ನಿಮ್ಮ ಒಪ್ಪಂದದ ಪತ್ರದ ಮೇಲೆ ಅಲ್ಲಾಹನು ಗೆದ್ದಲನ್ನು ಬಿಟ್ಟಿದ್ದಾನೆ ಮತ್ತು ಅದು ಅಲ್ಲಾಹನ ಹೆಸರನ್ನು ಬಿಟ್ಟು ಉಳಿದೆಲ್ಲವನ್ನೂ ತಿಂದುಹಾಕಿದೆ ಎಂದು ಹೇಳಿದ್ದಾನೆ. ನನ್ನ ಸಹೋದರ ಪುತ್ರನ ಮಾತು ಸತ್ಯವಾದರೆ ನೀವು ನಿಮ್ಮ ಬಹಿಷ್ಕಾರದ ನಿರ್ಧಾರದಿಂದ ಹಿಂದೆ ಸರಿಯಬೇಕು. ಒಂದು ವೇಳೆ ಅವನು ಸುಳ್ಳುಗಾರನೆಂದು ಸಾಬೀತಾದರೆ ನಾನು ಅವನನ್ನು ನಿಮ್ಮ ವಶಕ್ಕೆ ಒಪ್ಪಿಸುತ್ತೇನೆ; ನೀವು ಅವನನ್ನು ವಧಿಸಬೇಕಾದರೆ ವಧಿಸಿರಿ, ಜೀವಂತವಾಗಿ ಇರಿಸಬೇಕಾದರೆ ಹಾಗೆ ಮಾಡಿರಿ’. ಅನಂತರ ಒಪ್ಪಂದದ ಪತ್ರವನ್ನು ನೋಡಲಾದಾಗ, ಅದು ಹಝ್ರತ್ ಪೈಗಂಬರ್(ಸ) ಹೇಳಿದಂತೆಯೇ ಇತ್ತು. ಇದರಿಂದಾಗಿ ಖುರೈಶಿಯರು ತಮ್ಮ ಜನರ ಮುಂದೆಯೇ ನಾಚಿಕೆಪಡಬೇಕಾಯಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ವಿವರಿಸುತ್ತಾರೆ: ಅಬೂಜಹಲ್, ಹಝ್ರತ್ ಪೈಗಂಬರ್(ಸ)ರ ಕಠಿಣ ಶತ್ರುವಾಗಿದ್ದನು. ಆದರೆ ಆತನು ಕೂಡ ಒಂದು ಸಂದರ್ಭದಲ್ಲಿ ಹೀಗೆ ಹೇಳಿದನು: ‘ನಾವು ನಿನ್ನನ್ನು ಸುಳ್ಳುಗಾರನೆಂದು ಹೇಳುವುದಿಲ್ಲ, ಬದಲಾಗಿ ನೀನು ತಂದಿರುವ ಬೋಧನೆಯನ್ನು ನಿರಾಕರಿಸುತ್ತಿದ್ದೇವೆ’. ಅಂದರೆ ಅಬೂಜಹಲ್‌ನಂತಹ ಕಡು ವಿರೋಧಿ ಮತ್ತು ದುಷ್ಟ ವ್ಯಕ್ತಿಯ ಹೃದಯವೂ ಹಝ್ರತ್ ಪೈಗಂಬರ್(ಸ)ರನ್ನು ಸುಳ್ಳುಗಾರನೆಂದು ಕರೆಯಲು ಸಿದ್ಧವಿರಲಿಲ್ಲ. ಉಮಯ್ಯ ಬಿನ್ ಖಲಫ್ ಕೂಡ ಹಝ್ರತ್ ಪೈಗಂಬರ್(ಸ)ರ ಕಡು ವಿರೋಧಿಯಾಗಿದ್ದನು, ಆದರೆ ಒಂದು ಸಂದರ್ಭದಲ್ಲಿ ಅವನ ಬಾಯಿಂದಲೂ ಈ ಮಾತು ಹೊರಬಂದಿತು: ‘ದೇವನಾಣೆ, ಮುಹಮ್ಮದ್(ಸ) ಮಾತನಾಡುವಾಗ ಸತ್ಯವನ್ನೇ ಹೇಳುತ್ತಾರೆ, ಸುಳ್ಳು ಹೇಳುವುದಿಲ್ಲ’ ‘ಸತ್ಯ ತಾನಾಗಿಯೇ ಬಾಯಿ ಬಿಡುತ್ತದೆ’ ಎಂಬ ಮಾತಿನಂತೆ ಹಝ್ರತ್ ಪೈಗಂಬರ್(ಸ)ರ ಸತ್ಯಸಂಧತೆ ಎಷ್ಟೊಂದು ಪ್ರಬಲವಾಗಿತ್ತು ಎಂದರೆ ಶತ್ರುಗಳಿಂದಲೂ ತಮ್ಮ ಸತ್ಯಸಂಧತೆ ಮತ್ತು ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳುವಂತೆ ಮಾಡಿತು.

ಮದೀನಾದ ಯಹೂದಿಯರ ಸಾಕ್ಷ್ಯವೂ ಇದೆ. ಮುಸ್ಲಿಮರು ಮತ್ತು ಯಹೂದಿ ಜನಾಂಗವಾದ ಬನೂ ಖುರೈಝ ನಡುವೆ ಪರಸ್ಪರ ಸಹಕಾರದ ಒಪ್ಪಂದವಿತ್ತು. ಅಹ್‌ಝಾಬ್ ಯುದ್ಧದ ಸಮಯದಲ್ಲಿ ಬನೂ ನಝೀರಿನ ಮುಖಂಡ ಹುಯಯ್ ಬಿನ್ ಅಖ್ತಬ್, ಬನೂ ಖುರೈಝದ ಮುಖಂಡ ಕಅ್‌ಬ್ ಬಿನ್ ಅಸದ್‌ನ ಬಳಿಗೆ ಹೋದನು ಮತ್ತು ಮುಸ್ಲಿಮರನ್ನು ಸೋಲಿಸಲು ಮುಸ್ಲಿಮರೊಂದಿಗಿನ ಒಪ್ಪಂದವನ್ನು ಮುರಿದು ಖುರೈಶಿಯರಿಗೆ ಸಹಾಯ ಮಾಡಲು ಅವನನ್ನು ಒಪ್ಪಿಸುವ ಪ್ರಯತ್ನ ಮಾಡಿದನು. ಈ ಸಂದರ್ಭದಲ್ಲಿ ಬನೂ ಖುರೈಝದ ಮುಖಂಡ ಮತ್ತು ಮುಸ್ಲಿಮರ ಶತ್ರುವಾಗಿದ್ದ ಕಅಬ್ ಬಿನ್ ಅಸದ್ ಹೀಗೆ ಹೇಳಿದನು: ‘ನಾನು ಹಝ್ರತ್ ಪೈಗಂಬರ್(ಸ)ರ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದೇನೆ ಮತ್ತು ನಾನು ಆ ಒಪ್ಪಂದವನ್ನು ಖಂಡಿತ ಮುರಿಯುವುದಿಲ್ಲ. ನಾನು ಅವರಲ್ಲಿ ನಿಷ್ಠೆ ಮತ್ತು ಸತ್ಯಸಂಧತೆಯ ಹೊರತು ಬೇರೇನನ್ನೂ ಕಂಡಿಲ್ಲ’

ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ‘ನಾನು ಕೆಲವೊಮ್ಮೆ ಹಾಸ್ಯದೊಂದಿಗೆ ಮಾತನಾಡುತ್ತೇನೆ, ಆದರೆ ಅದರಲ್ಲಿಯೂ ಕೇವಲ ಸತ್ಯವನ್ನೇ ಹೇಳುತ್ತೇನೆ.’

ಹಝ್ರತ್ ಪೈಗಂಬರ್(ಸ) ಒಮ್ಮೆ ಹೀಗೆ ಹೇಳಿದರು: ‘ಜನರನ್ನು ನಗಿಸುವುದಕ್ಕಾಗಿ ಸುಳ್ಳು ಮಾತು ಹೇಳುವವನಿಗೆ ವಿನಾಶವಿದೆ.’

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ವೈಯಕ್ತಿಕ ಸ್ಥಾನವು ಸತ್ಯದ ವಿಷಯದಲ್ಲಿ ಎಷ್ಟೊಂದು ಉನ್ನತವಾಗಿತ್ತೆಂದರೆ, ಅವರ ಸಮುದಾಯವೇ ಅವರಿಗೆ ಅತ್ಯಂತ ಸತ್ಯವಂತ ಎಂದು ಹೆಸರಿಟ್ಟಿತ್ತು. ಅವರು ತಮ್ಮ ಜಮಾಅತಿಗೂ ಸತ್ಯದ ಮೇಲೆ ನೆಲೆನಿಲ್ಲಲು ಸದಾ ಉಪದೇಶ ನೀಡುತ್ತಿದ್ದರು. ಸತ್ಯವೇ ಒಳಿತಿನ ಕಡೆಗೆ ಸೆಳೆಯುತ್ತದೆ, ಮತ್ತು ಒಳಿತೇ ಮನುಷ್ಯನಿಗೆ ಸ್ವರ್ಗವನ್ನು ತಂದುಕೊಡುತ್ತದೆ ಎಂದು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು. ಸತ್ಯದ ಅಸಲು ಸ್ಥಾನವೇನೆಂದರೆ, ಮನುಷ್ಯನು ನಿರಂತರವಾಗಿ ಸತ್ಯವನ್ನೇ ಹೇಳುತ್ತಾ ಹೋಗಿ, ಕೊನೆಗೆ ದೇವನ ಸನ್ನಿಧಿಯಲ್ಲೂ ಅವನು ಸತ್ಯವಂತನೆಂದು ಪರಿಗಣಿಸಲ್ಪಡಬೇಕು.

(ಹುಝೂರ್ ಹೇಳಿದರು:) ನಾವು ನಮ್ಮ ಸತ್ಯಸಂಧತೆಯ ಗುಣಮಟ್ಟ ಎಷ್ಟಿದೆ ಎಂದು ಅವಲೋಕಿಸುವುದು ಇಂದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ ಮತ್ತು ನಮ್ಮಲ್ಲಿರುವ ದೌರ್ಬಲ್ಯಗಳನ್ನು ನಾವೇ ನಿವಾರಿಸಿಕೊಳ್ಳಬೇಕು.

(ಖುತ್ಬದ ಕೊನೆಯಲ್ಲಿ ಹುಝೂರ್, ಮಿರ್ಝಾ ನಸೀಮ್ ಅಹ್ಮದ್ ಸಾಹಿಬ್‌ರ ಪತ್ನಿಯಾದ ಶಾಹಿದಾ ಅಹ್ಮದ್ ಸಾಹಿಬರ ಜನಾಝ಼ ಗ್ವಾಯಿಬ್ ನಮಾಝ಼ನ್ನು ನಿರ್ವಹಿಸುವುದಾಗಿ ಹೇಳಿದರು.)

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis(atba)***
At, ***‘Masjid Mubarak’,*** *Islamabad, Tilford,* U.K. On 17-04-2026
**Summarized by** *Majlis Ansarullah Bharat*
***Kannada Translation:*** Moulavi Inamullah for Kannada Desk, Qadian
***Reviewed by:*** M.P Ibrahim | ***Layout:*** Basheer K.P. Manjeshwar
***Published By:*** Kannada Isha’at Team for Nazarath Nashr-O-Isha’ath, Qadian
***Email:*** *khutuba.kannada@gmail.com*
**You can find all the Sermons archived at**: www.alislam.org/friday-sermon